# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

ಸಿ.ಸಿ. ನಂ. :120/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುರೇಶ | ಪಿ.ಡಬ್ಲ್ಯೂ: 3 |
| ತಂದೆಯ ಹೆಸರು | : | ವಿಷ್ಣು ಆಚಾರಿ | ಸಿ.ಡಬ್ಲ್ಯೂ: 2 |
| ವಯಸ್ಸು | : | 55 ವರ್ಷ | |
| ಉದ್ಯೋಗ | : | ಕಾರ್ಪೆಂಟರಿ ಕೆಲಸ | |
| ವಾಸ್ತವ್ಯ | : | ಕಿನ್ನರ, ಕಾರವಾರ | |

ಸತ್ಯ ಪ್ರತಿಜ್ಞೆಯ ಮೇರೆಗೆಃ 27-07-2022

**ಕಲಂ. 299 ರಡಿಯಲ್ಲಿ ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ ಸ ಅ ರವರಿಂದಃ**

ನನಗೆ ಚಾಸಾ.3 ರವರ ಪರಿಚಯ ಇದೆ. ಚಾಸಾ.3 ರವರು ನನ್ನ ಹೆಂಡತಿ. ಈಗ್ಗೆ 4 ವರ್ಷಗಳ ಹಿಂದೆ ಚಾಸಾ.1 ರವರ ಕ್ಲಿನಿಕ್ ನಲ್ಲಿ ಕಳ್ಳತನ ಆಗಿತ್ತು. ಆಗ ಪೊಲೀಸರು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಸಹಿಯನ್ನು ಪುನಃ ನೋಡಿದರೆ ಗುರುತಿಸಬಲ್ಲೆ. ದಿನಾಂಕಃ 17.01.2017 ರ ಸ್ಥಳ ಪಂಚನಾಮೆ ಜೆರಾಕ್ಸ ಪ್ರತಿಯಾಗಿದ್ದರಿಂದ ನಿಷಾನೆಯಾಗಿ ಗುರುತಿಸಿಲ್ಲ. ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನಾನು ಓದಿ ನೋಡಿಲ್ಲ. ಪೊಲೀಸರು ನನ್ನನ್ನು ಎಲ್ಲಿಗೂ ಕರೆಸಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಹಿರಿಯ ಸ.ಸ.ಅ. ರವರು ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು )**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

2. ದಿನಾಂಕಃ 17.01.2017 ರಂದು ಮಧ್ಯಾಹ್ನ 12.00 ರಿಂದ 1.00 ಘಂಟೆ ತನಕ ಪೊಲೀಸರು ನನ್ನನ್ನು ಮತ್ತು ಚಾಸಾ.3 ರವರನ್ನು ಚಾಸಾ.1 ರವರ ಸಂಜಿವಿನಿ ಕ್ಲಿನಿಕ್ ಹತ್ತಿರ ಕರೆಯಿಸಿ ಅವರು ತೋರಿಸಿದ ಕಳ್ಳತನ ಆದ ಜಾಗದಲ್ಲಿ ಸ್ಥಳ ಪಂಚನಾಮೆ ಜರುಗಿಸಿ ಪಂಚನಾಮೆ ವಿವರಗಳನ್ನು ನನಗೆ ಓದಿ ಹೇಳಿ ಸ್ಥಳದಲ್ಲಿಯೇ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ

ಸರಿಯಲ್ಲ. ನನಗೆ ಪಂಚನಾಮೆಯ ವಿಷಯ ಗೊತ್ತಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-

ಮುಖ್ಯ ನಾಯಿಕ ದಂಡಾಧಿಕಾರಿಗಳು,

ಕಾರವಾರ